# ಕರ್ನಾಟಕ ಸರ್ಕಾರ–ಅರಣ್ಯ ಇಲಾಖೆ
## ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರಿ ರವರ ಕಛೇರಿ, ಹಳೆ ಪಿ.ಬಿ. ರಸ್ತೆ, ಬೆಳಗಾವಿ–590016.

**ಸಂಖ್ಯೆ: ಎ2/ಇಎಸ್‌ಟಿ/ಅವೀನೇನೇ/ಸಿಆರ್–24/2023–24 ದಿನಾಂಕ:15–09–2023**

## ಪ್ರಕಟಣೆ

2023–24 ನೇ ಸಾಲಿನಲ್ಲಿ 20 (ಇಪ್ಪತ್ತು) ಅರಣ್ಯ ವೀಕ್ಷಕ ಗ್ರೂಪ್ 'ಡಿ' ಹುದ್ದೆಗಳ ನೇರ ನೇಮಕಾತಿ ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಾವಳಿಗಳು 2021 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:FEE/203/FEG/2015 ದಿನಾಂಕ: 06–08–2019 ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019 ರನ್ವಯ ಕರ್ನಾಟಕ ಅರಣ್ಯ ಇಲಾಖೆಯ ಬೆಳಗಾವಿ ವೃತ್ತದಲ್ಲಿ ಖಾಲಿ ಇರುವ 20 (ಇಪ್ಪತ್ತು) ಅರಣ್ಯ ವೀಕ್ಷಕ ಗ್ರೂಪ್ 'ಡಿ' ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ದಿನಾಂಕ:27–09–2023 ರಿಂದ ಸಲ್ಲಿಸತಕ್ಕದ್ದು. ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ:26–10–2023 ರ ಅಪರಾಹ್ನ 5.30 ಗಂಟೆ ನಿಗಧಿಪಡಿಸಲಾಗಿದೆ ಹಾಗೂ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ: 31–10–2023 ನ್ನು ನಿಗಧಿಪಡಿಸಲಾಗಿರುತದೆ.

ಈ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆ, ಪಠ್ಯಕ್ರಮ (syllabus), ಆನ್‌ಲೈನ್ ಅರ್ಜಿಯನ್ನು ಕರ್ನಾಟಕ ಅರಣ್ಯ ಇಲಾಖಾ ವೆಬ್‌ಸೈಟ್: https://aranya.gov.in/ ದ ಮುಖ ಪುಟದ ಕೆಳಭಾಗದಲ್ಲಿ ಇರುವ ನೇಮಕಾತಿ ಶೀರ್ಷಿಕೆಯಡಿ ಪ್ರಕಟಿಸಲಾಗುವುದು. ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಆನ್‌ಲೈನ್ ವ್ಯವಸ್ಥೆಯ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಸದರಿ ವ್ಯವಸ್ಥೆಯನ್ನು ಹೊರತುಪಡಿಸಿ ಇತರೆ ಯಾವುದೇ ವಿಧದಲ್ಲಿ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

**ಸಹಿ/–ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**ಹಾಗೂ ಆಯ್ಕೆ ಪ್ರಾಧಿಕಾರ ಬೆಳಗಾವಿ ವೃತ್ತ, ಬೆಳಗಾವಿ**

DIPR/BGM/RO-NO-415/KSMCA/2023-24

**ಕರ್ನಾಟಕ ಸರ್ಕಾರ**
**Government of Karnataka**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು – 03
Aranya Bhavan, 18th Cross,
Malleshwaram, Bengaluru – 03
Tele: 080 23343770
Email: pccfrecruitment@gmail.com

**No.** KFD/HOFF/B9(RCT)/4/2022-PnR **E-850955**
Dated: 15-09-2023

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು/ ಬಳ್ಳಾರಿ/ ಬೆಳಗಾವಿ/ ಚಾಮರಾಜನಗರ/
ಚಿಕ್ಕಮಗಳೂರು/ ಧಾರವಾಡ/ ಹಾಸನ/ ಕೆನರಾ/
ಕಲಬುರ್ಗಿ/ ಕೊಡಗು/ ಮಂಗಳೂರು/ ಮೈಸೂರು/ ಶಿವಮೊಗ್ಗ ವೃತ್ತ.

**ವಿಷಯ:** ಕರ್ನಾಟಕ ಅರಣ್ಯ ಇಲಾಖೆಯಲ್ಲಿನ ವಿವಿಧ ವೃತ್ತಗಳ ಹಂತದಲ್ಲಿ ಖಾಲಿ ಇರುವ ಅರಣ್ಯ ವೀಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅಧಿಸೂಚನೆಯನ್ನು ಹೊರಡಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಅಪಜೀ 191 ಅಅಸೇ 2021 ದಿನಾಂಕ: 27.04.2022 *[413 ಅರಣ್ಯ ವೀಕ್ಷಕ ಹುದ್ದೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಾನುಸಾರ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿ]*
2. ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06.08.2019 [Karnataka Forest Department Services (Recruitment) (Amendment) Rules 2019 *[ವೃಂದ ಮತ್ತು ನೇಮಕಾತಿ ನಿಯಮಗಳು]*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಅರಣ್ಯ ಇಲಾಖೆಯಲ್ಲಿ 2019-20, 2021-21 ಹಾಗೂ 2021-22ನೇ ಸಾಲಿನಲ್ಲಿ ಹೊಸದಾಗಿ ಸೃಜಿಸಲಾದ 413 ಅರಣ್ಯ ವೀಕ್ಷಕ ಹುದ್ದೆಗಳನ್ನು ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ [DR:PR=75:25] ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿ, ನೇಮಕಾತಿ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಹಾಗೂ ಮುಂದುವರೆಸಲು ಅನುಮತಿ ನೀಡಲಾಗಿರುತ್ತದೆ.

ಉಲ್ಲೇಖ (2)ರ ವೃಂದ ಮತ್ತು ನೇಮಕಾತಿ ನಿಯಮಗಳ ಷೆಡ್ಯೂಲ್-IIರ ಕ್ರಮ ಸಂಖ್ಯೆ: 53ರಲ್ಲಿರುವ ಅರಣ್ಯ ವೀಕ್ಷಕ ವೃಂದದ ನೇಮಕಾತಿ ನಿಯಮಗಳನ್ವಯ ಶೇಕಡ 75ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅದರನ್ವಯ 310 ಅರಣ್ಯ ವೀಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಬೇಕಾಗಿರುತ್ತದೆ.

ಈ ಕುರಿತು ಆಯಾ ವೃತ್ತಗಳಲ್ಲಿ ಈ ಕೆಳಕಂಡ ಖಾಲಿ ಇರುವ ಅರಣ್ಯ ವೀಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರಡು ಅಧಿಸೂಚನೆಯನ್ನು ಸಿದ್ದಪಡಿಸಿ, ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

| ಕ್ರ. ಸಂ. | ವೃತ್ತ | ವಿಭಾಗ | ಅರಣ್ಯ ವೀಕ್ಷಕ ಹುದ್ದೆಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು | ಬೆಂಗಳೂರು ನಗರ ವಿಭಾಗ | 5 |
| | | ಬೆಂಗಳೂರು ಗ್ರಾಮಾಂತರ ವಿಭಾಗ | 5 |
| | | ರಾಮನಗರ ವಿಭಾಗ | 5 |
| | | ಕೋಲಾರ ವಿಭಾಗ | 5 |
| | | ಚಿಕ್ಕಬಳ್ಳಾಪುರ ವಿಭಾಗ | 5 |
| | | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | 8 |
| **ಬೆಂಗಳೂರು ವೃತ್ತ ಒಟ್ಟು** | | | **33** |

I/485314/2023

| ಕ್ರ. ಸಂ. | ವೃತ್ತ | ವಿಭಾಗ | ಅರಣ್ಯ ವೀಕ್ಷಕ ಹುದ್ದೆಗಳ ಸಂಖ್ಯೆ |
|---|---|---|---|
| 2 | ಬೆಳಗಾವಿ | ಬೆಳಗಾವಿ ವಿಭಾಗ | 6 |
| | | ಘಟಪ್ರಭ ವಿಭಾಗ | 7 |
| | | ಬಾಗಲಕೋಟೆ ವಿಭಾಗ | 6 |
| | | ವಿಜಯಪುರ ವಿಭಾಗ | 1 |
| | | **ಬೆಳಗಾವಿ ವೃತ್ತ ಒಟ್ಟು** | **20** |
| 3 | ಬಳ್ಳಾರಿ | ಬಳ್ಳಾರಿ ವಿಭಾಗ | 4 |
| | | ವಿಜಯನಗರ ವಿಭಾಗ | 6 |
| | | ಚಿತ್ರದುರ್ಗ ವಿಭಾಗ | 4 |
| | | ದಾವಣಗೆರೆ ವಿಭಾಗ | 4 |
| | | ಕೊಪ್ಪಳ ವಿಭಾಗ | 2 |
| | | **ಬಳ್ಳಾರಿ ವೃತ್ತ ಒಟ್ಟು** | **20** |
| 4 | ಚಾಮರಾಜನಗರ | ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ | 6 |
| | | ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ | 10 |
| | | ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ | 6 |
| | | ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ | 10 |
| | | **ಚಾಮರಾಜನಗರ ವೃತ್ತ ಒಟ್ಟು** | **32** |
| 5 | ಚಿಕ್ಕಮಗಳೂರು | ಚಿಕ್ಕಮಗಳೂರು ವಿಭಾಗ | 1 |
| | | ಕೊಪ್ಪ ವಿಭಾಗ | 10 |
| | | ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು | 14 |
| | | **ಚಿಕ್ಕಮಗಳೂರು ವೃತ್ತ ಒಟ್ಟು** | **25** |
| 6 | ಧಾರವಾಡ | ಧಾರವಾಡ ವಿಭಾಗ | 2 |
| | | ಗದಗ ವಿಭಾಗ | 1 |
| | | ಹಾವೇರಿ ವಿಭಾಗ | 4 |
| | | **ಧಾರವಾಡ ವೃತ್ತ ಒಟ್ಟು** | **7** |
| 7 | ಹಾಸನ | ಹಾಸನ ವಿಭಾಗ | 8 |
| | | ತುಮಕೂರು ವಿಭಾಗ | 12 |
| | | **ಹಾಸನ ವೃತ್ತ ಒಟ್ಟು** | **20** |
| 8 | ಕೆನರಾ | ಕಾರವಾರ ವಿಭಾಗ | 4 |
| | | ಹಳಿಯಾಳ ವಿಭಾಗ | 3 |
| | | ಯಲ್ಲಾಪುರ ವಿಭಾಗ | 5 |
| | | ಶಿರಸಿ ವಿಭಾಗ | 1 |
| | | ಹೊನ್ನಾವರ ವಿಭಾಗ | 5 |
| | | ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ | 14 |
| | | **ಕೆನರಾ ವೃತ್ತ ಒಟ್ಟು** | **32** |
| 9 | ಕೊಡಗು | ಮಡಿಕೇರಿ ವಿಭಾಗ | 5 |
| | | ವಿರಾಜಪೇಟೆ ವಿಭಾಗ | 5 |
| | | ಮಡಿಕೇರಿ ವನ್ಯಜೀವಿ ವಿಭಾಗ | 6 |
| | | **ಕೊಡಗು ವೃತ್ತ ಒಟ್ಟು** | **16** |
| 10 | ಕಲಬುರ್ಗಿ | ಬೀದರ್ ವಿಭಾಗ | 1 |
| | | ಕಲಬುರ್ಗಿ ವಿಭಾಗ | 11 |

| ಕ್ರ. ಸಂ. | ವೃತ್ತ | ವಿಭಾಗ | ಅರಣ್ಯ ವೀಕ್ಷಕ ಹುದ್ದೆಗಳ ಸಂಖ್ಯೆ |
|---|---|---|---|
| | | ಯಾದಗಿರಿ ವಿಭಾಗ | 7 |
| | | ರಾಯಚೂರು ವಿಭಾಗ | 4 |
| | | **ಕಲುಬುರ್ಗಿ ವೃತ್ತ ಒಟ್ಟು** | **23** |
| 11 | ಮಂಗಳೂರು | ಮಂಗಳೂರು ವಿಭಾಗ | 5 |
| | | ಕುಂದಾಪುರ ವಿಭಾಗ | 5 |
| | | ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ | 10 |
| | | **ಮಂಗಳೂರು ವೃತ್ತ ಒಟ್ಟು** | **20** |
| 12 | ಮೈಸೂರು | ಮೈಸೂರು ವಿಭಾಗ | 5 |
| | | ಹುಣಸೂರು ವಿಭಾಗ | 4 |
| | | ಮಂಡ್ಯ ವಿಭಾಗ | 5 |
| | | ಮೈಸೂರು ವನ್ಯಜೀವಿ ವಿಭಾಗ | 6 |
| | | ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ, ಹುಣಸೂರು | 12 |
| | | **ಮೈಸೂರು ವೃತ್ತ ಒಟ್ಟು** | **32** |
| 13 | ಶಿವಮೊಗ್ಗ | ಶಿವಮೊಗ್ಗ ವಿಭಾಗ | 8 |
| | | ಭದ್ರಾವತಿ ವಿಭಾಗ | 8 |
| | | ಸಾಗರ ವಿಭಾಗ | 6 |
| | | ಶಿವಮೊಗ್ಗ ವನ್ಯಜೀವಿ ವಿಭಾಗ | 8 |
| | | **ಶಿವಮೊಗ್ಗ ವೃತ್ತ ಒಟ್ಟು** | **30** |
| | | **13 ವೃತ್ತಗಳ ಒಟ್ಟು ಹುದ್ದೆಗಳು** | **310** |

ಉಲ್ಲೇಖ (2)ರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ **[ಪ್ರತಿ ಲತ್ತಿಸಿದೆ]** ಅರಣ್ಯ ವೀಕ್ಷಕ ವೃಂದದ **ಆಯ್ಕೆ ಪ್ರಾಧಿಕಾರವಾದ ಸಂಬಂಧಿಸಿದ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿಗಳು ನೇಮಕಾತಿ ಅಧಿಸೂಚನೆಯನ್ನು ದಿನಾಂಕ: 19.09.2023ರಂದು ಹೊರಡಿಸಿ, ದಿನಾಂಕ: 21.09.2023ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಇ-ಗೆಜೆಟ್ ಮೂಲಕ ಅಧಿಸೂಚನೆಯನ್ನು ಅಧಿಸೂಚಿಸಿ, ಅಲ್ಲದೆ, ಎರಡು ಪ್ರಮುಖ ಕನ್ನಡ ದಿನ ಪತ್ರಿಕೆಗಳಲ್ಲಿ ಸಂಕ್ಷಿಪ್ತವಾಗಿ ಪ್ರಕಟಿಸಿ, ದಿನಾಂಕ:27.09.2023ರಿಂದ 26.10.2023ರ ವರೆಗಿನ ಅವಧಿಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಪಡೆಯಲು ಪೂರ್ವ ಸಿದ್ದತೆಗಳನ್ನು ಮಾಡಿಕೊಳ್ಳಲು ಹಾಗೂ ರೋಸ್ಟರ್ ಮತ್ತು ಖಾಲಿ ಹುದ್ದೆಗಳ ವಹಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದೆ.**

Signed by ತಮ್ಮ ನಂಬುಗೆಯ
Rajiv Ranjan
Date: 15-09-2023 15:30:20

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)